ರೂಪಾಯಿಗಳನ್ನು ಕೊಡುತ್ತಿದ್ದೇವೆ, ಜಿಲ್ಲಾ ಮಟ್ಟದಲ್ಲಿ ನಡೆಯುವಂತವುಗಳಿಗೆ 15 ಸಾವಿರ ರೂಪಾಯಿಗಳು, ರಾಜ್ಯಮಟ್ಟದಲ್ಲಿನಡೆಯುವಂತವುಗಳಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ. ಆದರೆ ಇದು ಸಾಲುವುದಿಲ್ಲ ಅಂತ ನಾನು ಒಪ್ಪಿಕೊಳ್ಳುತ್ತೇನೆ. ಇದರಲ್ಲಿ ಲೋಕಲ್ ಪಾರ್ಟಿಷಿಪೇಷನ್ ಬಹಳಷ್ಟು ಇರುತ್ತದೆ. ಸ್ಥಳೀಯವಾಗಿ ಈ ಯುವಜನ ಮೇಳಗಳನ್ನು ಕಂಡಕ್ಟ್ ಮಾಡುತ್ತಿದ್ದೇವೆ. ಮುಂದೆ ಇದಕ್ಕೆ ನಾವು ಹೆಚ್ಚಿನ ಹಣವನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ವೇಳೆಯು ಮುಗಿಯಿತು, ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು, ಪಟ್ಟಿ ಸಂಖ್ಯೆ 21.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ 21ನೇ ಪಟ್ಟಿಯಲ್ಲಿರುವ ಒಟ್ಟು 40 ಪ್ರಶ್ನೆಗಳ ಪೈಕಿ 37 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತೇನೆ.

ಬಳ್ಳಾರಿ ಜಿಲ್ಲೆಯಲ್ಲಿ ಖಾಸಗಿ ವಲಯಕ್ಕೇ ಪ್ರಸ್ತಾಪಿಸಿರುವ ಪ್ರವಾಸೋದ್ಯಮ ಯೋಜನೆಗಳು

1661 - ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆಯಲ್ಲಿ ಖಾಸಗಿ ವಲಯಕ್ಕೆ ಪ್ರಸ್ತಾಪಿಸಿರುವ ಪ್ರವಾಸೋದ್ಯಮ ಯೋಜನೆಗಳಾವುವು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):

ಅ) ಇದುವರೆವಿಗೆ ಯೋಜನೆಗಳನ್ನೂ ಖಾಸಗಿ ವಲಯಕ್ಕೆ ಪ್ರಸ್ತಾಪಿಸಿರುವುದಿಲ್ಲ.

ರಾಜ್ಯದಲ್ಲಿ ನಬಾರ್ಡ್ ಸಹಾಯದಿಂದ ಕೈಗೆತ್ತಿಕೊಳ್ಳಲಾದ ರಸ್ತೆಗಳು

1662 - ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಲೋಕೋಪಯೋಗಿ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಬಾರ್ಡ್ ಸಹಾಯದಿಂದ ಕೈಗೆತ್ತಿಕೊಳ್ಳಲಾದ ರಸ್ತೆಗಳು ಯಾವುವು? ಹಾಗೂ ಆ ಬಗ್ಗೆ ಬಿಡುಗಡೆಯಾದ ಹಣದ ವಿವರ ನೀಡುವುದು.

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ನಬಾರ್ಡ್ ಸಾಲ ನೆರವಿನಲ್ಲಿ 119 ರಸ್ತೆ ಕಾಮಗಾರಿಗಳು ನಬಾರ್ಡ್‌ನಿಂದ ಒಪ್ಪಿತವಾಗಿದ್ದು ವಿವರವನ್ನು ಅನುಬಂಧದಲ್ಲಿ ನೀಡಿದೆ ಇದುವರೆವಿಗೂ ಹಣ ಬಿಡುಗಡೆಯಾಗಿರುವುದಿಲ್ಲ. (119 ರಸ್ತೆಗಳು - ಮೊತ್ತ 77.38 ಕೋಟಿ ರೂ.ಗಳು)